# ಕರ್ನಾಟಕ ಸರ್ಕಾರ
## ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/203/ಅಸೇಸೌ/ಯುಜಿಸಿ/2018-19/ಸೇವಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಉನ್ನತ ಶಿಕ್ಷಣ ಸೌಧ, ಶೇಷಾದ್ರಿ ರಸ್ತೆ
ಬೆಂಗಳೂರು, ದಿನಾಂಕ:27.10.2021

### ಸುತ್ತೋಲೆ

**ವಿಷಯ:** ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಸೇವಾ ಸಕ್ರಮಾತಿಗೊಂಡ ಅರೆಕಾಲಿಕ ಉಪನ್ಯಾಸಕರುಗಳಿಗೆ ಕ.ನಾ.ಸೇ.ನಿಯಮ 247(ಎ) ರನ್ವಯ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ವಿಸ್ತರಿಸುವ ಕುರಿತು.

**ಉಲ್ಲೇಖ:** 1. ಈ ಕಛೇರಿಯ ಸಮಸಂಖ್ಯೆಯ ಪತ್ರ ದಿನಾಂಕ:21.11.2020 ಮತ್ತು 23.07.2021
2. ಸರ್ಕಾರದ ಪತ್ರ ಸಂಖ್ಯೆ: ಇಡಿ 47 ಯುಇಸಿ 2021(ಇ) ದಿನಾಂಕ:08.10.2021.

** ** **

ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ತದನಂತರ ಸರ್ಕಾರದ ಆದೇಶದನ್ವಯ ಸೇವಾ ಸಕ್ರಮಾತಿ ಹೊಂದಿರುವ ಅರೆಕಾಲಿಕ ಉಪನ್ಯಾಸಕರುಗಳಿಗೆ ಕ.ನಾ.ಸೇ.ನಿ. ನಿಯಮ 247(ಎ)ರನ್ವಯ ಅರ್ಹತಾದಾಯಕ ಸೇವೆಯೆಂದು ಪರಿಗಣಿಸುವ ಸಂಬಂಧದಲ್ಲಿ ಉಲ್ಲೇಖ(1)ರ ಪತ್ರಗಳಲ್ಲಿ ಸರ್ಕಾರದ ಮಾರ್ಗದರ್ಶನ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಉಲ್ಲೇಖ(2)ರ ಸರ್ಕಾರದ ಪತ್ರದಲ್ಲಿ ಪ್ರಸ್ತಾವಿತ ಅರೆಕಾಲಿಕ ಉಪನ್ಯಾಸಕರುಗಳು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 1993-94 ಮತ್ತು 1994-95 ನೇ ಸಾಲಿನಲ್ಲಿ ಸೇವೆ ಸಲ್ಲಿಸಿದ ಅರೆಕಾಲಿಕ ಉಪನ್ಯಾಸಕರುಗಳನ್ನು ಸೇವಾ ಸಕ್ರಮಾತಿಗಾಗಿ ರಚಿಸಿದ K.C.S.(Absorption of Persons working as part time Lectures in the Karnatka Education Department Services Department of Collegiate Education) (Special) Rules, 1996 ರನ್ವಯ ಸೇವಾ ಸಕ್ರಮಾತಿ ಹೊಂದಿದ ಉಪನ್ಯಾಸಕರಾಗಿರುವುದಾಗಿದೆ. ಸದರಿ ಉಪನ್ಯಾಕರುಗಳು ದಿನಾಂಕ:22.01.1997 ರ ಅಧಿಸೂಚನೆ ಸಂಖ್ಯೆ:DPAR 48 SRE 96 ರನ್ವಯ ವಿಶೇಷ ನಿಯಮಗಳಡಿ ವಿಲೀನಗೊಂಡಿದ್ದು, ಕ್ರಮ ಸಂಖ್ಯೆ(4)ರಲ್ಲಿ "Pay Fixation, Seniority, leave and pension of part-time Lecturers absorbed under these rules : Notwithstanding anything contained in the Karnataka Civil Service Rules, or any rules Govening conditions of Service made or deemed to have been made under the Karnatka State Civil Services Act 1978 (Karnataka Act 14 of 1990) the initial basic pay of absorbed part-time lecturer, under these rules after he reports for duty as lecturer shall be fixed at the minimum of the scales of pay of the category of post in which he is absorbed and the services rendered before the absorption shall not count for the purpose of seniority, leave or pension" ಎಂದು ಇರುತ್ತದೆ. ಆದ್ದರಿಂದ ಸದರಿಯವರುಗಳು ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಅವಧಿಯನ್ನು ಕ.ನಾ.ಸೇ.ನಿ ನಿಯಮ 247-ಎ ರನ್ವಯ ಪಿಂಚಣಿ ಸೌಲಭ್ಯಗಳಿಗಾಗಿ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ಅವಕಾಶವಿರುವುದಿಲ್ಲ.

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 247-ಎ ರಡಿಯಲ್ಲಿನ ಸೌಲಭ್ಯವು ಸರ್ಕಾರಿ ಸೇವೆಗೆ ಕ್ರಮಬದ್ಧವಾಗಿ ಸೂಕ್ತ ನೇಮಕಾತಿ ಪ್ರಾಧಿಕಾರದಿಂದ ನೇರವಾಗಿ ನೇಮಕಗೊಂಡವರಿಗೆ ಮಾತ್ರ ಅನ್ವಯವಾಗುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 1993-94 ಮತ್ತು 1994-95 ನೇ ಸಾಲಿನಲ್ಲಿ ಸೇವೆ ಸಲ್ಲಿಸಿದ ಅರೆಕಾಲಿಕ ಉಪನ್ಯಾಸಕರುಗಳನ್ನು ಸೇವಾ ಸಕ್ರಮಾತಿಗಾಗಿ ರಚಿಸಿದ ದಿನಾಂಕ:22.07.1997 ರ ಅಧಿಸೂಚನೆ ಸಂಖ್ಯೆ:DPAR 48 SRE 96 ರನ್ವಯ K.C.S.(Absorption of Persons working as part time Lecturers in the Karnataka Education Department Services Department of Collegiate Education) (Special) Rules, 1996 ರನ್ವಯ ಸೇವಾ ಸಕ್ರಮಾತಿ ಹೊಂದಿರುವುದಾಗಿದೆ. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247-ಎ ನಿಯಮ (6) ಉಪ ಕಂಡಿಕೆ (VII)ರನ್ವಯ ಯಾವ ಗುತ್ತಿಗೆ ನೌಕರರ ಸೇವೆಗಳನ್ನು ವಿಶೇಷ ನಿಯಮಗಳ ಅಡಿಯಲ್ಲಿ ಸರ್ಕಾರದಲ್ಲಿ ಕ್ರಮಬದ್ಧಗೊಳಿಸಲಾಗಿದೆಯೋ, ಆ ಗುತ್ತಿಗೆ ನೌಕರರುಗಳಿಗೆ ಈ ನಿಯಮದ ಅಡಿಯಲ್ಲಿ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ನಿವೃತ್ತಿ ಸೌಲಭ್ಯಗಳಿಗೆ ಪರಿಗಣಿಸಲು ಅವಕಾಶವಿರುವುದಿಲ್ಲವೆಂದು ತಿಳಿಸಲಾಗಿದೆ. ಹಾಗೂ ಸದರಿ ನಿರ್ದೇಶನವನ್ನು ಪರಿಗಣಿಸದೇ ಈಗಾಗಲೇ ಸರ್ಕಾರದ ಹಂತದಲ್ಲಿ ತಪ್ಪಾಗಿ ಅರ್ಥೈಸಿ ಅನುಮತಿ ನೀಡಲಾಗಿರುವ ಅರೆಕಾಲಿಕ ಉಪನ್ಯಾಸಕರ ಪ್ರಕರಣಗಳಲ್ಲಿ ಈ ಸುತ್ತೋಲೆಯಲ್ಲಿ ಸೂಚಿಸಿರುವ ನಿರ್ದೇಶನದನ್ವಯ ಕ್ರಮವಹಿಸುವಂತೆ ಸೂಚಿಸಲಾಗಿದೆ.

ಅಡಕ:ಉಲ್ಲೇಖ (2)ರ ಪ್ರತಿ

Bluuuy 29/10/21

ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು

ಇವರಿಗೆ:

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ,- ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ
2. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಕಲಬುರಗಿ-ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು-ಮಾಹಿತಿಗಾಗಿ
2. ಮಹಾಲೇಖಪಾಲರು, (ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ , ಬೆಂಗಳೂರು-560001- ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ
3. ಮ್ಯಾನೇಜರ್/ಅಧೀಕ್ಷಕರು, ಪಿಂಚಣಿ ವಿಭಾಗ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು - ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ
4. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು, ಇಲಾಖಾ ವೆೈಬ್‌ಸೈಟ್‌ನಲ್ಲಿ ಪ್ರಕಟಿಸುವ ಸಂಬಂಧದಲ್ಲಿ ಅಗತ್ಯ ಕ್ರಮಕ್ಕಾಗಿ
5. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 47 ಯುಇಸಿ 2021 (ಇ)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 08/10/2021.

**ಇಂದ,**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ,
ಬೆಂಗಳೂರು.

**ಇವರಿಗೆ,**

ಆಯುಕ್ತರು,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು.

**ಮಾನ್ಯರೇ,**

ವಿಷಯ: ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಸೇವಾ ಸಕ್ರಮಾತಿಗೊಂಡ ಅರೆಕಾಲಿಕ ಉಪನ್ಯಾಸಕರುಗಳಿಗೆ ಕ.ನಾ.ಸೇ ನಿಯಮ 247 (ಎ) ರನ್ವಯ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ವಿಸ್ತರಿಸುವ ಕುರಿತು.

ಉಲ್ಲೇಖ: ಮುಖ್ಯ ಆಡಳಿತಾಧಿಕಾರಿಗಳು, ಕಾಲೇಜು ಶಿಕ್ಷಣ ಇಲಾಖೆ, ಇವರ ಪತ್ರ ಸಂಖ್ಯೆ: ಕಾಶಿಇ/203/ಅಸೇಸೌ/ಯುಜಿಸಿ/2018-19/ಸೇವಿ, ದಿನಾಂಕ: 23.07.2021.

((****))

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಪ್ರಸ್ತುತ ಪ್ರಕರಣದಲ್ಲಿ ಪ್ರಸ್ತಾವಿತ ಅರೆಕಾಲಿಕ ಉಪನ್ಯಾಸಕರುಗಳು , ಸರ್ಕಾರ ಪ್ರಥಮ ದರ್ಜೆ ಕಾಲೇಜುಗಳಲ್ಲಿ 1993-94 ಮತ್ತು 1994-95 ನೇ ಸಾಲಿನಲ್ಲಿ ಸೇವೆ ಸಲ್ಲಿಸಿದ ಅರೆಕಾಲಿಕ ಉಪನ್ಯಾಸಕರುಗಳನ್ನು ಸೇವಾ ಸಕ್ರಮಾತಿಗಾಗಿ ರಚಿಸಿದ K.C.S (Absorption of persons working as part time Lecturers in the Karnataka Education Department Services) Department of Collegiate Education) (Special) Rules, 1996 ರನ್ವಯ ಸೇವಾ ಸಕ್ರಮಾತಿ ಹೊಂದಿದ ಉಪನ್ಯಾಸಕರಾಗಿರುವುದಾಗಿದೆ. ಸದರಿ ಉಪನ್ಯಾಸಕರುಗಳು ದಿನಾಂಕ: 22/01/1997 ರ ಅಧಿಸೂಚನೆ ಸಂಖ್ಯೆ: DPAR 48 SRE 96 ರನ್ವಯ ವಿಶೇಷ ನಿಯಮಗಳಡಿ ವಿಲೀನಗೊಂಡಿದ್ದು, ಕ್ರಮಸಂಖ್ಯೆ (4) ರಲ್ಲಿ "Pay fixation, Seniority, leave and pension of part-time lecturers absorbed under these rules: Notwithstanding anything contained in the Karnataka Civil Services Rules, or any rules Governing conditions of service made or deemed to have been made under the Karnataka State Civil Services Act 1978 (Karnataka Act 14 of 1990)

the initial basic pay of absorbed part-time lecturer, under these rules after he reports for duty as lecturer shall be fixed at the minimum of the scales of pay of the category of post in which he is absorbed and the services rendered before the absorption shall not count for the purposes of seniority, leave or pension" ಎಂದು ಇರುತ್ತದೆ. ಆದ್ದರಿಂದ, ಸದರಿಯವರುಗಳು ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಅವಧಿಯನ್ನು ಕ.ನಾ.ಸೇ.ನಿ ನಿಯಮ 247-ಎ ರನ್ವಯ ಪಿಂಚಣಿ ಸೌಲಭ್ಯಗಳಿಗಾಗಿ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ಅವಕಾಶವಿರುವುದಿಲ್ಲ.

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 247-ಎ ರಡಿಯಲ್ಲಿನ ಸೌಲಭ್ಯವು ಸರ್ಕಾರಿ ಸೇವೆಗೆ ಕ್ರಮಬದ್ಧವಾಗಿ ನೇರವಾಗಿ ನೇಮಕಗೊಂಡವರಿಗೆ ಮಾತ್ರ ಅನ್ವಯವಾಗುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಪ್ರಸ್ತಾವಿತ ಅರೆಕಾಲಿಕ ಉಪನ್ಯಾಸಕರುಗಳು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 1993-94 ಮತ್ತು 1994-95 ನೇ ಸಾಲಿನಲ್ಲಿ ಸೇವೆ ಸಲ್ಲಿಸಿದ ಅರೆಕಾಲಿಕ ಉಪನ್ಯಾಸಕರುಗಳನ್ನು ಸೇವಾ ಸಕ್ರಮಾತಿಗಾಗಿ ರಚಿಸಿದ ದಿನಾಂಕ: 22/07/1997 ರ ಅಧಿಸೂಚನೆ ಸಂಖ್ಯೆ: DPAR 48 SRE 96 ರನ್ವಯ K.C.S (Absorption of persons working as part time Lecturers in the Karnataka Education Department Services) Department of Collegiate Education) (Special) Rules, 1996 ರನ್ವಯ ಸೇವಾ ಸಕ್ರಮಾತಿ ಹೊಂದಿರುವುದಾಗಿದೆ. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247-ಎ ನಿಯಮ (6) ಉಪ ಕಂಡಿಕೆ (Vii)ರನ್ವಯ ಯಾವ ಗುತ್ತಿಗೆ ನೌಕರರ ಸೇವೆಗಳನ್ನು ವಿಶೇಷ ನಿಯಮಗಳ ಅಡಿಯಲ್ಲಿ ಸರ್ಕಾರದಲ್ಲಿ ಕ್ರಮಬದ್ಧಗೊಳಿಸಲಾಗಿದೆಯೋ, ಆ ಗುತ್ತಿಗೆ ನೌಕರರುಗಳಿಗೆ ಈ ನಿಯಮದ ಅಡಿಯಲ್ಲಿ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ನಿವೃತ್ತಿ ಸೌಲಭ್ಯಗಳಿಗೆ ಪರಿಗಣಿಸಲು ಅವಕಾಶವಿರುವುದಿಲ್ಲವೆಂದು ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ಈ ಪತ್ರವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 352 ವೆಚ್ಚ-8 2021, ದಿನಾಂಕ: 28-09-2021 ರ ಸಹಮತಿಯನ್ವಯ ಹೊರಡಿಸಲಾಗಿದೆ.

ತಮ್ಮ ನಂಬುಗೆಯ,

(ಎಸ್.ಹರ್ಷ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ).